

**ರಟ್ಟೀಹಳ್ಳಿ ರಾಘವಾಂಕುರ**
ಕಲೆ: ವಿಶ್ವನಾಥ್ ಎ.ಎಸ್.

# ಕಳಕೊಂಡವರು

ಅತ್ತ ಮಲೆನಾಡ ಸೆರಗಿನ ತುದಿಗಂಟಿಕೊಂಡು, ಇತ್ತ ಬಯಲುಸೀಮೆಯ ಬೆರಗಿಗೂ ಒಗ್ಗಿಕೊಂಡ ವಿಶಿಷ್ಟ ಭೌಗೋಳಿಕ ಪರಿಸರದ ಅರೆ ಮಲೆನಾಡು, ಹಾವೇರಿ ಜಿಲ್ಲೆಯ ರಟ್ಟೀಹಳ್ಳಿ. 'ಐದು ಮೂಲಿ ರಟ್ಟಳ್ಳಿ ಉದ್ಧಾರ ಮಾಡ್ಸ ಊರಲ್ಲಿದು. ಇಲ್ಲೇರು ಊರ್ ಬಿಡಮಟ ಯಾರೂ ಉದ್ಧಾರಾಗಲ್ಲ, ಹೊರಗಿನೆರಿಗೆ ಸುಖಾ ಕೊಡದ ಇರಲ್ಲ' ಎಂಬ ನಿಲುವು ಕಂಡುಕೊಂಡಿದ್ದ ನಾರಾಣಪ್ಪ. ನಲವತ್ತೈದು ವರ್ಷದ ನಾರಾಣಪ್ಪ ಎತ್ತರದ ಕಟ್ಟುಮಸ್ತಿನ ಮನುಷ್ಯನೇ. ವಯೋಸಹಜ ಮಂಡಿಯ ಕೀಲುಗಳು ಸವೆದು ಎರಡು ವರ್ಷ ಹಾಸಿಗೆ ಹಿಡಿದಿದ್ದು ಈಗೆರಡು ದಿನಗಳಿಂದ ಪರವಾಗಿಲ್ಲ ಅನ್ನುವಷ್ಟರಮಟ್ಟಿಗೆ ಓಡಾಡುತ್ತಿದ್ದಾನೆ. ತನ್ನ ಸ್ನೇಹಿತ ನಿಂಗಪ್ಪನ ಸಮಸ್ಯೆಗೆ ಏನಾದರೂ ಪರಿಹಾರ ಹತ್ತಿತಾ ಎಂದು ತಿಳಿಯಲು, ನಿಂಗಪ್ಪನ ಮನೆ ಕಡೆಗೆ ಸೈಕಲ್ ತಿರುಗಿಸಿದ. ಸ್ಟ್ಯಾಂಡ್ ಹಾಕಿ ಕುಂಟುಗಾಲಿನಲ್ಲಿ ನಡೆಯುತ್ತಾ, ಬೀಡಿಯ ಕೊನೆ ಉಸಿರನ್ನೊಮ್ಮೆ ಎಳೆದು ಅಷ್ಟೇ ಅವಸರದಲ್ಲಿ ನೆಲಕ್ಕೆಸೆದು ಕಾಲಿನಿಂದ ಹೊಸಕಿ ಹಾಕಿದ. 'ನಿಂಗಪ್ಪಾ...' ತನ್ನ ಬರುವಿಕೆಯನ್ನು ಸೂಚಿಸಿದ. ಮನೆಯೊಳಕ್ಕೆ ನಿಂಗಪ್ಪನ ಹೆಂಡತಿ ಅಂಬವ್ವ ತಲೆಮೇಲೆ ಕೈಹೊತ್ತು ಚಿಂತಿಸುತ್ತಾ ಯಾವುದೋ ಯೋಚನೆಯಲ್ಲಿದ್ದಳು. ಅಂಬವ್ವಳನ್ನ ಕಂಡು ಬಾಗಿಲ ಬಳಿ ಆಕೆಗೆ ಇನ್ನೊಮ್ಮೆ ತನ್ನ ಇರುವಿಕೆಯನ್ನು ಸ್ಪಷ್ಟಪಡಿಸಲು 'ನಿಂಗಪ್ಪಾ...' ಎಂದು ತುಸು ಜೋರು ಧ್ವನಿಯಲ್ಲಿ ಕರೆದ. ವಾಸ್ತವದ ಅರಿವಿಗೆ ಬಂದ ಆಕೆ, 'ಬಾ ಯಣಾ, ಕರೀಗೆ ಹುಲ್ಲ ತರತೇನಂತಾ ಹೋಗ್ಯಾರ, ಈಗ ಬರಬೋದ್ ಬಾ ಒಳಾಕ, ಕುತಗಾ'ಎಂದು ಕುರ್ಚಿ ಕಡೆಗೆ ಕೈ ತೋರಿಸಿದಳು.

'ಏನಾತವಾ ಏನರ ಸುದ್ದಿ, ಸಿಕ್ಕವಂತಾ ಏನು ಆಂ?' ನಾರಾಣಪ್ಪ ಕುರ್ಚಿಯನ್ನು ತನ್ನತ್ತ ಎಳೆದುಕೊಂಡು ಕೌತುಕದಲ್ಲಿ ಕೇಳಿದ. 'ಎಲ್ಲಿ ಸಿಗತಾವಣಾ, ಯಾ ದುಡಿಲಾರದ ನನ್ ಮಕ್ಳು ಮನಿ ಮುರಿಯಾಕ ನಿಂತಾರ? ಹಾಟಗಳ್ಳರು. ಇದೆಂತಾ ಶನಿ ಬಡಕಂತಪ್ಪ ನಮಿಗೆ, ಒಬ್ಬರದು ತಿನ್ನಿಲ್ಲ ನೆಕ್ಕಲಿಲ್ಲ, ಮೂಸಿನೂ ನೋಡಲಿಲ್ಲ ಅಂತಾದ್ರಾಗ...' ಎಂದು ಅಂಬವ್ವ ತನ್ನೊಡಲ ಬೆಂಕಿ ಉಗುಳಿಕೊಂಡು, 'ಚಾಕ್ಕ್ ಇಡತನಿ ತಡೀ' ಎಂದು ನೆಲಕ್ಕೆ ಕೈಯೂರಿ ಮೇಲಕ್ಕೆದ್ದಳು. ತನಗೆ ಚಾ ಕುಡಿಯುವಾಸೆಯಿದ್ದೂ ಈ ಸಂದರ್ಭಕ್ಕೆ ಬೇಡವೆನಿಸಿ, 'ಏ ಬ್ಯಾಡ ಬಾರವಾ, ಈಗೀನ ಕುಡದನಿ ಈಗೆನ್ ಕುಡಿತಿ ಚಾ' ಎಂದು ತನ್ನ ಬೇಸರವನ್ನೂ ಈಗಾಗಲೇ ಘಟಿಸಿದ ಸಂಗತಿಗೆ ಸಮೀಕರಿಸಿದ. ಅಂಬವ್ವನೂ ಸುಮ್ಮನಾಗಿ ಕೂತಳು.